ಜೆಎಸ್‌ಎಸ್ ಮಹಾವಿದ್ಯಾಪೀಠ
ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ, ಮೈಸೂರು

# ಶಿವಾನುಭವ ದಾಸೋಹ–341

**26 ಸೆಪ್ಟೆಂಬರ್ 2026 * ಶನಿವಾರ * ಸಂಜೆ 6.00**

**ಕೆಎಸ್‌ಎಸ್ ಸಂಸ್ಕೃತ ಪಾಠಶಾಲೆ, ವಾಣಿವಿಲಾಸ ರಸ್ತೆ, ಮೈಸೂರು**

---

ದಿವ್ಯಾಶೀರ್ವಾದ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**
ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

ಅಧ್ಯಕ್ಷತೆ

**ಡಾ. ಎಂ. ನಂಜುಂಡಪ್ಪ**
ವಿಶ್ರಾಂತ ಇತಿಹಾಸ ಪ್ರಾಧ್ಯಾಪಕರು ಮತ್ತು ಉಪಾಧ್ಯಕ್ಷರು, ಜೆಎಸ್‌ಎಸ್ ಹಿರಿಯ
ವಿದ್ಯಾರ್ಥಿಗಳ ಸಂಘ ಮತ್ತು ಗೃಹ ನಿರ್ಮಾಣ ಸಹಕಾರ ಸಂಘ

ಉಪನ್ಯಾಸ

**ಡಾ. ಸಿ.ಜಿ. ಉಷಾದೇವಿ**
ವಿಶ್ರಾಂತ ಕನ್ನಡ ಪ್ರಾಧ್ಯಾಪಕರು

**ವಿಷಯ : ತ್ರಿವಿಧ ದಾಸೋಹಿ ಪರಮಪೂಜ್ಯ ರಾಜೇಂದ್ರ ಶ್ರೀಗಳು**

ವಚನ ಗಾಯನ

**ಕು. ಎನ್. ಚೂಡಾಮಣಿ**
ಮೈಸೂರು

---

ಪ್ರಾಯೋಜಕರು

**ಶರಣೆ ಎಂ.ಎ. ನೀಲಾಂಬಿಕಾ**
ನಿವೃತ್ತ ಉಪನ್ಯಾಸಕರು
# 242, ಉತ್ತರಾದಿ ಮಠದ ರಸ್ತೆ, ಖಿಲ್ಲೆ ಮೊಹಲ್ಲಾ, ಮೈಸೂರು 570 004

**ತಮಗೆ ಆದರದ ಸ್ವಾಗತ**

ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ 23ನೇ ಪೀಠಾಧಿಪತಿಗಳಾದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಪ್ರಸಾದನಿಲಯಗಳು ಹಾಗೂ ಶಿಕ್ಷಣಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಜನತೆಯ ಸರ್ವಾಂಗೀಣ ಉನ್ನತಿಗೆ ಕಾರಣರಾದರು. ಶಿಕ್ಷಣದ ಮೂಲಕ ಸಾಮಾಜಿಕ ಅಭಿವೃದ್ಧಿ ಸಾಧ್ಯ ಎಂಬುದನ್ನು ಮನಗಂಡಿದ್ದರು. ಶ್ರೀಗಳವರು ಜಾತಿ, ಮತ, ಪಂಥ, ಧರ್ಮ ಭೇದವಿಲ್ಲದೆ ಅನ್ನದಾಸೋಹ, ಜ್ಞಾನದಾಸೋಹದ ಜೊತೆಗೆ ಜನತೆಯ ಸಮಗ್ರ ಅಭಿವೃದ್ಧಿಗಾಗಿ, ನೈತಿಕತೆ ಹಾಗೂ ಧಾರ್ಮಿಕತೆಗಳ ಪ್ರಸಾರಕ್ಕಾಗಿ, ಹಲವಾರು ದಶಕಗಳ ಹಿಂದೆಯೇ ಶರಣತತ್ತ್ವ ಪ್ರಸಾರ ಸಮಿತಿಯಂಥ ಸಂಸ್ಥೆಗಳ ಮೂಲಕ ಧರ್ಮ ದಾಸೋಹವನ್ನು ಪ್ರಾರಂಭಿಸಿದರು. 1986ರಲ್ಲಿ ಶರಣ ಸಾಹಿತ್ಯ ಪರಿಷತ್ತು ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯನ್ನು ಸ್ಥಾಪಿಸಿ ಆಧ್ಯಾತ್ಮಿಕ ಚಿಂತನೆಗೆ ಹೊಸ ಆಯಾಮವನ್ನು ನೀಡಿದರು.

ದತ್ತಿಯ ವತಿಯಿಂದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ದಿನಾಂಕ 12.5.1996ರಂದು 'ಶಿವಾನುಭವ ದಾಸೋಹ' ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಅಂದಿನಿಂದಲೂ ಪ್ರತಿ ತಿಂಗಳ ಕೊನೆಯ ಶನಿವಾರದಂದು ಈ ಕಾರ್ಯಕ್ರಮವು ನಿರಂತರವಾಗಿ ನಡೆದುಕೊಂಡು ಬರುತ್ತಿದೆ. ಧರ್ಮ, ದರ್ಶನ, ವಚನಸಾಹಿತ್ಯ, ಧರ್ಮಗಳ ತೌಲನಿಕ ವಿವೇಚನೆ, ಜೀವನಕಲೆ ಮೊದಲಾದ ವಿಷಯಗಳನ್ನು ಕುರಿತು ಉಪನ್ಯಾಸ ಏರ್ಪಡಿಸಲಾಗುತ್ತಿದೆ.

**ಡಾ. ಎಂ. ನಂಜುಂಡಪ್ಪನವರು** ಯಳಂದೂರು ತಾಲ್ಲೂಕು ಗೌಡಹಳ್ಳಿಯವರು. ಎಂ.ಎ, ಪಿಹೆಚ್.ಡಿ ಪದವೀಧರರು. ವಿದ್ಯಾರ್ಥಿ ದಿಸೆಯಲ್ಲಿಯೇ ಕಾಲೇಜು ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿರುತ್ತಾರೆ. ಜೆಎಸ್ಎಸ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ, ಪ್ರಾಧ್ಯಾಪಕರಾಗಿ ನಂತರ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಇತಿಹಾಸಕ್ಕೆ ಸಂಬಂಧಿಸಿದ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವರು. ಜೆಎಸ್ಎಸ್ ಹಿರಿಯ ವಿದ್ಯಾರ್ಥಿಗಳ ಸಂಘ ಮತ್ತು ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ಸುಮಾರು ನಲವತ್ತು ವರ್ಷಗಳಿಂದ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ, ಗ್ರಾಮಾಂತರ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಹಲವು ರೀತಿಯಲ್ಲಿ ನೆರವಾಗಿದ್ದಾರೆ. ಪ್ರಸ್ತುತ ಸಂಘದ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

**ಡಾ. ಸಿ.ಜಿ. ಉಷಾದೇವಿಯವರು** ಎಂ.ಎ, ಬಿಇಡಿ ಹಾಗೂ ಪಿಎಚ್‌ಡಿ ಪದವೀಧರರು. ಟಿ. ನರಸೀಪುರದಲ್ಲಿ ವಿದ್ಯೋದಯ ಪ್ರಥಮ ದರ್ಜೆ ಕಾಲೇಜಿನಲ್ಲಿ 1980ರಿಂದ 2014ರವರೆಗೆ ಕನ್ನಡ ಸಹ ಪ್ರಾಧ್ಯಾಪಕರಾಗಿ, ವಿಭಾಗದ ಮುಖ್ಯಸ್ಥರಾಗಿ 32 ವರ್ಷಗಳ ಸೇವೆ ಸಲ್ಲಿಸಿ ನಿವೃತ್ತರಾಗಿರುತ್ತಾರೆ. ಹಲವಾರು ಸಾಹಿತ್ಯಕ, ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಉಪನ್ಯಾಸ ನೀಡಿದ್ದಾರೆ. ಬೊಂತಾದೇವಿ, ಬೆಳಕಿಗೊಂದು ಹೆಜ್ಜೆ, ಶ್ರೀ ಎಂ.ಸಿ. ಶಿವಾನಂದ ಶರ್ಮಾ–ಹೀಗೆ ಹಲವಾರು ಕೃತಿಗಳು ಹಾಗೂ ಲೇಖನಗಳನ್ನು ರಚಿಸಿದ್ದಾರೆ.

**ಶರಣೆ ಎಂ.ಎ. ನೀಲಾಂಬಿಕಾರವರು** ಖ್ಯಾತ ನಾಟಕಕಾರರಾಗಿದ್ದ ಶ್ರೀ ಸಿ. ಅಂಕಪ್ಪನವರ ಸುಪುತ್ರಿ. ಜೆಎಸ್ಎಸ್ ಶಿಕ್ಷಣಸಂಸ್ಥೆಗಳಲ್ಲಿ ಶಿಕ್ಷಕರಾಗಿ ಮತ್ತು ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಉತ್ತಮ ಪ್ರವಚನಕಾರರು, ಶರಣ ಸಾಹಿತ್ಯ–ಸಂಸ್ಕೃತಿಯ ಬಗ್ಗೆ ಅಪಾರ ಅಭಿಮಾನವುಳ್ಳವರು. ನಲವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಮೈಸೂರು ಕದಳಿ ಮಹಿಳಾ ವೇದಿಕೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಶ್ರೀ ಶಿವರಾತ್ರೀಶ್ವರ ಅಕ್ಕನ ಬಳಗದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಶ್ರೀಮತಿ ಶಕುಂತಲ ಜಯದೇವ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿ, ಗೌರವಗಳಿಗೆ ಪಾತ್ರರಾಗಿದ್ದಾರೆ.